ಕಣ್ಣಿಗೆ ಬೀಳ್ತೀವೆ ನಿಮ್ಮಪ್ಪನಿಗೆ?' ಎಂದೆ.

'ಏನು ಹಾಗಂದ್ರೆ?' ಅರ್ಥವಾಗದೆ ಶೀಲಾ ಪ್ರಶ್ನಿಸಿದಳು.

ಆಕೆಯನ್ನು ನಾನು ಮದುವೆಯಾಗಬಯಸಿದ್ದೆ ಎಂಬ ವಿಚಾರ ಚಂದ್ರಪ್ಪ ಅಂಕಲ್‌ಗೆ ಗೊತ್ತಿದ್ದರೂ ಅವರದನ್ನು ಶೀಲಾಳಿಗೆ ಹೇಳಿರಲಿಲ್ಲವೆಂಬುದು ಆಕೆಯ ಮಾತಿನಿಂದ ಅರ್ಥವಾಯಿತು.

'ಹೋಗ್ಲಿ ಬಿಡು' ಎಂದೆ.

'ಇಲ್ಲ, ನಿಮ್ಮ ಮನಸ್ಸಿನಲ್ಲೆ ಏನೋ ಇದ್ದಂತಿದೆ. ಹೇಳಿ' ಎಂದು ಶೀಲಾ ಒತ್ತಾಯಿಸಿದಳು.

'ಯಾವಾಗ ಹೇಳಬೇಕಾಗಿತ್ತೊ ಆಗ ಹೇಳಿದ್ರೆ ಆಗ್ತಿತ್ತು. ಈಗ ಹೇಳಿ ಏನು ಪ್ರಯೋಜನ?' ಎಂದೆ. ಆಕೆ ಮತ್ತೂ ವಿವರಣೆ ಬೇಡಿದಳು.

'ಹೌದು ಶೀಲಾ, ನಿಜ. ನಾನು ನಿನ್ನನ್ನು ಪ್ರೀತಿಸಿದ್ದೆ. ಮದುವೆ ಆಗ್ಬೇಕೂಂತ ಆಸೇನೂ ಪಟ್ಟಿದ್ದೆ. ನಿನ್ನ ತಂದೆ ನನ್ನ ಆಸೇನೆಲ್ಲ ಚಿವುಟಿ ಹಾಕಿದ್ರು' ಒಂದು ಕ್ಷಣ ಮನಸ್ಸು ವಿಚಲಿತವಾಯಿತು.

'ನಿಜಾನಾ ಇದು?' ಶೀಲಾಳ ಕಣ್ಣು ತುಂಬಿ ಬಂತು.

'ಇಲ್ಲದಿದ್ದರೆ ನಿನಗಿವತ್ತು ಮುದುಕನ ಜೊತೆ ಸಂಸಾರ ನಡೆಸುವ ಪ್ರಮೇಯ ಬರುತ್ತಿರಲಿಲ್ಲ ಅಳಬೇಡ ಶೀಲಾ, ಯಾಕೆ ಅಳ್ತೀಯಾ' ಎನ್ನುತ್ತಾ ನಾನು ಆಕೆಯ ಹತ್ತಿರ ಹೋದೆ. ಆಕೆಯ ಬೆನ್ನ ಮೇಲೆ ಸಾಂತ್ವನದ ಕೈಯಿರಿಸಿದೆ. ಮೆತ್ತನೆ ಕರೆದೊಯ್ದು ಸೋಫಾದಲ್ಲಿ ಕುಳ್ಳಿರಿಸಿದೆ. ಹೊರಗಡೆ ಬಾಗಿಲು ಬಡಿದ ಸದ್ದಾಯಿತು. ನಾನು ಗಾಬರಿಗೊಂಡು ಹಿಂಬಾಗಿಲಿನಿಂದ ಓಡಿಹೋದೆ. ಬೇರೇನೂ ಘಟನೆ ಖಂಡಿತವಾಗಿ ನಡೆದಿಲ್ಲ' ಡಾ. ಗಣೇಶ್ ಮಾತು ನಿಲ್ಲಿಸಿದರು.

'ಹಾಗಿದ್ದಲ್ಲಿ ಹಿಂಬಾಗಿಲಿನಿಂದ ಏಕೆ ಓಡಿ ಹೋಗಬೇಕಿತ್ತು?' ಇನ್ಸ್‌ಪೆಕ್ಟರ್ ಪ್ರಶ್ನಿಸಿದರು.

'ಬಂದವರು ಯಾರೇ ಇರಲಿ, ನಮ್ಮ ಬಗ್ಗೆ ಸಂಶಯಪಟ್ಟುಕೊಳ್ಳುವ ಸಾಧ್ಯತೆಯಿತ್ತು. ಅದು ನನ್ನ ವೈಯಕ್ತಿಕ ನಿರ್ಧಾರ ಆಗಿರಲಿಲ್ಲ. ಶೀಲಾಳೇ ಹಾಗೆ ಮಾಡುವಂತೆ ಸೂಚಿಸಿದಳು.'

'ಅವಳ್ಯಾಕೆ ಹಾಗೆ ಹೇಳಿದಳು?'

'ಅದು ಹೀಗೇಂತ ನಾನು ಹೇಳಲಾರೆ. ಬಹುಶಃ ಬಂದವರು ಒಂದು ವೇಳೆ ಪ್ರೊ. ಭಾಸ್ಕರ್ ಆಗಿರುತ್ತಿದ್ದರೆ– ಅವರಿಗೂ ಶೀಲಾ ಫೋನ್ ಮಾಡಿದ್ಳಲ್ಲಾ– ಪಾರ್ಟಿಗೆ ಬರಬೇಕಾಗಿದ್ದ ಈತ ಇಲ್ಲಿಗ್ಯಾಕೆ ಬಂದ? ಅಂತ ಸಂಶಯ ಪಟ್ಟುಕೊಳ್ಳಬಹುದು. ಅಥವಾ ದೀಪೂ ಆಗಿರುತ್ತಿದ್ದರೆ– ಮೊದಲಿನಿಂದಲೇ ಆತನಿಗೆ ನನ್ನ ಬಗ್ಗೆ ಸಂದೇಹ, ಪ್ರೊಫೆಸರ್ ಬಂದಾಗ ಇಲ್ಲಸಲ್ಲದ್ದು ಹೇಳಿಕೊಟ್ಟು ರಾದ್ಧಾಂತವೆಬ್ಬಿಸಬಹುದು ಎಂಬ ಕಾರಣಕ್ಕಿರಬಹುದು.'

'ನಿಜ ಹೇಳಿ ಡಾ. ಗಣೇಶ್, ಅಲ್ಲಿಗೆ ಹೋಗಬೇಕಿದ್ದರೆ ನಿಮ್ಮ ನಿಜವಾದ ಉದ್ದೇಶ ಏನಾಗಿತ್ತು?' ಡಿ.ಎಸ್.ಪಿ. ಸವಾಲೆಸೆದರು.

'ನನ್ನ ಉದ್ದೇಶ ಏನೇ ಆಗಿದ್ದರೂ ಅದು ಈಡೇರಲಿಲ್ಲ. ಈ ಮಾತಂತೂ ನಿಜ'.

'ಆಕೆಯ ಮೇಲೆ ಅತ್ಯಾಚಾರ ಮಾಡಿ ಏನೂ ಆಗಿಲ್ಲ ಅಂತೀರಲ್ಲಾರಿ' ಇನ್ಸ್‌ಪೆಕ್ಟರ್ ಗದರಿದರು.

'ನೆವರ್, ನಾನಂತೂ ಅದನ್ನು ಮಾಡಿಲ್ಲ' ಡಾ. ಗಣೇಶ್ ಅಷ್ಟೇ ಬಿರುಸಾಗಿ ನುಡಿದರು.

ಡಿಎಸ್ ಪಿಯವರ ಭಾಷೆ ಬದಲಾಯಿತು: 'ಅಂಥ ಸಾಚಾ ವ್ಯಕ್ತಿ ನೀನಾಗಿರ್ತಿದ್ರೆ ಮುಂಬಾಗಿಲಿನ ಅಗುಳಿ ಒಡೆದದ್ದೇಕೆ? ನಿನ್ನ ಉದ್ದೇಶ ಏನು ಅನ್ನೋದನ್ನು ಅದೇ ಸ್ಪಷ್ಟಪಡಿಸುತ್ತೆ. ಇನ್ನೂ ಒಂದು ವಿಚಾರ ಹೇಳಿರ್ತೀನಿ ಡಾ. ಗಣೇಶ್, ಮುಂಬಾಗಿಲಿನ ಅಗುಳಿ ಒಡೆದುಹೋದ ಪ್ರಶ್ನೆ ಬಂದೇ ಬರುತ್ತೇಂತ ನಿನಗ್ಗೊತ್ತು. ಅದ್ಕೆ ನೀನದನ್ನು ಹಾಗಲ್ಲ ಹೀಗೇಂತ ಮೊದಲೇ ಮಾತಿನ ನಡುವೆ ಹೇಳಿಬಿಟ್ಟೆ. ಬಾಗಿಲು ಸರಿ ಇರ್ತಿದ್ರೆ ನೀನು ಬಾಗಿಲಿನ ಮಾತು ಎತ್ತುತ್ತಾ ಇದ್ಯಾ?' ಡಿ.ಎಸ್.ಪಿ. ಪುಟ್ಟಸೋಮೇಗೌಡರ ಪ್ರಶ್ನೆಗೆ ಡಾ. ಗಣೇಶ್ ಒಂದು ಕ್ಷಣ ತಬ್ಬಿಬ್ಬಾದರು.

'ಅಗುಳಿ ಒಡೆದು ಹೋಗಿಲ್ಲ. ನಾನು ಬೆಲ್ ಮಾಡಿದಾಗ ಶೀಲಾಳೇ ಬಾಗಿಲು ತೆರೆದಳು.'

'ಶೀಲಾ ಬಾಗಿಲು ತೆಗೆಯದ್ದಕ್ಕೆ ನೀನದನ್ನು ದಬ್ಬಿ ಚಿಲಕ ತುಂಡು ಮಾಡಿದಿ.'

'ಇಲ್ಲ ಸರ್. ನಾನು ಹೇಳಿದ್ದೆಲ್ಲವೂ ಸತ್ಯ.'

'ಹಳೇ ಬಾಗಿಲು. ದಬ್ಬಿ ಚಿಲಕ ಮುರಿದು ಒಳಗೆ ಬಂದು ಆಕೆಯನ್ನು ಅತ್ಯಾಚಾರ ಮಾಡಿ ಸಾಯಿಸಿ ಈಗ ಏನು ಮಾತಾಡ್ತಿ?' ಡಿ.ಎಸ್.ಪಿ. ಕನಲಿದರು.

'ಇಲ್ಲ ಸರ್. ಆಕೆಯ ಬಗ್ಗೆ ನನ್ನ ಹಳೆಯ ಆಸೆಗಳು ಸುಪ್ತವಾಗಿ ಉಳಿದುಕೊಂಡಿದ್ದವೆಂಬುದು ನಿಜ. ಅದನ್ನು ನಾನು ಅಲ್ಲಗಳೆದಿಲ್ಲ.'

'ಅಷ್ಟೇ ಆಗಿರುತ್ತಿದ್ದರೆ ಬಾಗಿಲು ಮುರಿಯುವ ಪ್ರಮೇಯ ಯಾಕೆ ಬಂತು? ನಿಜ ಹೇಳ್ತೀಯೋ ನಮ್ ಭಾಷೇಲೇ ಹೇಳಿಸ್ಬೇಕಾ?'

'ಬಾಗಿಲು ತೆರೆಯಲು ತಡೆವಾಯಿತೂಂತ ಮುರಿದ್ಯಾ?'

'ಯಾಕೆ ತಡವಾಯ್ತು? ಅದನ್ನಾದ್ರೂ ಹೇಳ್ತೀಯಾ?'

'ಹೇಳು. ಶೀಲಾ ಯಾಕೆ ಬಾಗಿಲು ತೆರೆಯಲಿಲ್ಲ?'

'ಅದು ನನಗೆ ಸಂಬಂಧಪಡುವ ಪ್ರಶ್ನೆ ಅಲ್ಲ. ಬೇಕಿದ್ದರೆ ಯಾರು ಮನೆಯೊಳಗಿಂದ ಚಿನ್ನ ಕದ್ದಿದ್ದಾರೋ ಅವರನ್ನೇ ಪ್ರಶ್ನಿಸಿ. ಶೀಲಾಳ ಹಿಂದೆ ಮುಂದೆ ಇರುತ್ತಿದ್ದ ಅವಳ ಬಾಡಿಗಾರ್ಡ್ ದೀಪೂವನ್ನು ಪ್ರಶ್ನಿಸಿ. ಪವನ್‌ನನ್ನು ಪ್ರಶ್ನಿಸಿ. ನನ್ನನ್ನೇಕೆ ಪ್ರಶ್ನಿಸ್ತೀರಿ?'

'ನಮ್ಮ ದಾರಿ ತಪ್ಪಿಸೋ ಪ್ರಯತ್ನ ಮಾಡ್ತಾ ಇದ್ದೀಯ. ನಾನು ಹೇಳ್ತೇನೆ ಡಾಕ್ಟರ್. ಶೀಲಾಳ ಮೇಲೆ ಆಸೆಯಿತ್ತು ಎಂಬ ಒಂದು ಸತ್ಯವನ್ನಷ್ಟೆ ಹೇಳಿ ಉಳಿದವುಗಳನ್ನು ಮುಚ್ಚುವ ಪ್ರಯತ್ನಪಡ್ತಾ ಇದ್ದೀ. ನಿನ್ನ ಅವತಾರ ಕಂಡು ಆಕೆಗೆ ಭಯವಾಯ್ತು. ಅದಕ್ಕೇ ಬಾಗಿಲು ತೆರೆಯಲಿಲ್ಲ. ಬೆಳಕೆಲ್ಲ ಆಫ್ ಮಾಡಿ ಒಳಗೆ ಕುಳಿತಳು. ನೀನು ಒದ್ದು ಬಾಗಿಲು ಮುರಿದು ಅವಳ ಮೇಲೆ ಅತ್ಯಾಚಾರ ಮಾಡಿದಿ. ಆಕೆ ಪ್ರತಿಭಟಿಸಿದಳು. ಅಷ್ಟರಲ್ಲಿ ಯಾರೋ ಬಂದದ್ದು ಗೊತ್ತಾಗಿ ಶೀಲಾ ಎಲ್ಲವನ್ನೂ ಬಹಿರಂಗಪಡಿಸಿ ಬಿಡಬಹುದೆಂಬ ಭಯದಿಂದ ಅವಳ ಕತ್ತು ಹಿಚುಕಿ ಕೊಲೆ ಮಾಡಿ ಹಿಂಬಾಗಿಲಿನಿಂದ ಓಡಿ ಹೋದಿ' ಇನ್ಸ್‌ಪೆಕ್ಟರ್ ಕೆಂಡವಾಗಿದ್ದರು.

'ಇಲ್ಲ, ನಾನು ಕೊಲೆ ಮಾಡಿಲ್ಲ, ನಾನು ಬಾಗಿಲು ಮುರಿಯಲೇ ಇಲ್ಲ. ಶೀಲಾ ನನ್ನನ್ನು ಆದರದಿಂದ ಬರಮಾಡಿಕೊಂಡಿದ್ದಳು. ಕೊಲೆಗೂ ನನಗೂ ಏನೇನೂ ಸಂಬಂಧ ಇಲ್ಲ' ಡಾ. ಗಣೇಶ್ ಬೊಬ್ಬಿಡುತ್ತಿದ್ದಂತೆಯೆ ಆತನ ಕೆನ್ನೆಗೆ ಫಟಾರನೆ ಒಂದು ಏಟು ಬಿತ್ತು.

'ಅಯ್ಯೋ' ಎನ್ನುತ್ತಾ ಡಾ. ಗಣೇಶ್ ನೆಲಕ್ಕೆ ಕುಸಿದರು.

ಇಬ್ಬರು ಕಾನ್‌ಸ್ಟೇಬಲ್‌ಗಳು ಅವರನ್ನೆತ್ತಿ ಲಾಕಪ್ಪಿಗೆ ತಳ್ಳಿದ ರಭಸಕ್ಕೆ ಉಂಗುರವಿದ್ದ ಊತದ ಬೆರಳು ಇನ್ನೊಮ್ಮೆ ಜಜ್ಜಿ ಹೋಗಿ ಆರ್ತನಾದ ಮತ್ತೊಮ್ಮೆ ತಾರಕಕ್ಕೇರಿತು.

## 17

ಸಂಶಯದ ಸಂಕಲೆ ಪವನ್‌ನಿಂದ ಡಾ. ಗಣೇಶರ ಮೈಗೆರಗಿತ್ತು. ನಟರಾಜ್ ಪಟ್ಟಣಶೆಟ್ಟರು ಗೆಸ್ಟ್‌ಹೌಸ್‌ನ ತಮ್ಮ ಕೊಠಡಿಯಲ್ಲಿ ಕುಳಿತು ಲೆಕ್ಕದ ಸಮಸ್ಯೆ ಬಿಡಿಸುವ ಮಕ್ಕಳಂತೆ ಕೂಡಿ–ಕಳೆದು, ಭಾಗಿಸತೊಡಗಿದರು. ಡಾ. ಗಣೇಶರು ಶೀಲಾಳ ಜೊತೆಗಿದ್ದಾಗ ಬಾಗಿಲು ಒದ್ದು ಮುರಿದವರ್ಯಾರು? ಡಾ. ಗಣೇಶರೇ ಒದ್ದು ಮುರಿದು ಒಳಬಂದಿರಬಹುದು ಎಂಬುದು ಊಹೆಗೂ ನಿಲುಕದ ಮಾತು. ಸಂದೇಹ ಮತ್ತೆ ದೀಪೂನ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸುವಂತೆ ಮಾಡಿತು. ಪವನ್‌ನ ಬಳಿ ಚಿನ್ನ ಲಭಿಸದೇ ಹೋಗಿರುತ್ತಿದ್ದರೆ ದೀಪೂ ಬಾಗಿಲು ಒಡೆದು ಒಳಗೆ ಬಂದು ಚಿನ್ನ ಲಪಟಾಯಿಸಿದ ಎಂದುಕೊಳ್ಳಬಹುದಿತ್ತು. ಪವನ್‌ಗೆ ಬಾಗಿಲು ಒದ್ದು ಚಿಲಕ ಮುರಿಯುವಷ್ಟು ಧೈರ್ಯ ಇದ್ದಂತಿಲ್ಲ. ಶೀಲಾಳನ್ನು ಪ್ರೊ. ಭಾಸ್ಕರ್ ಮದುವೆಯಾದಂದು ಪವನ್ ಅಲ್ಲಿಗೆ ಬಂದು ಏನೂ ಕಿಸಿಯಲಾಗದೆ ನಿಂತದ್ದು. ತೋಟದ ಕೆಲಸದಾಕೆಯನ್ನು ಬಲಾತ್ಕರಿಸುವುದಕ್ಕೆ ಹೋಗಿ ಚಂದ್ರಪ್ಪನವರ ಕೈಗೆ ಸಿಕ್ಕಿ ತೋಳ ಹೋಗಿ ಕುರಿಮರಿಯಾದದ್ದು, ಭೂತದ ಕೋಲದಂದು ಪ್ರೊ. ಭಾಸ್ಕರ್‌ರನ್ನು ಕೊಲ್ಲುವ ವಿಫಲ ಪ್ರಯತ್ನಕ್ಕೆ ಬಾಡಿಗೆ ಗೂಂಡಾಗಳನ್ನು ಬಳಸಿದ್ದು, ಪ್ರೊ. ಭಾಸ್ಕರರ ಮನೆಯೊಳಕ್ಕೆ ಪ್ರವೇಶಿಸುವ ಪ್ರಯತ್ನದಲ್ಲಿ ಪ್ರತಿಬಾರಿಯೂ ಸೋತದ್ದು – ಈ ಯಾವುದೇ ನಡೆ ಪವನ್‌ನನ್ನು ರೌಡಿಯನ್ನಾಗಿ ನಿರೂಪಿಸುವುದಿಲ್ಲ. ಹಾಗಿರುವಾಗ ಹೊರಚಿಲಕ ಮುರಿಯುವ ಧೈರ್ಯ ಆತನಿಗೆ ಬಂತು ಎಂದರೆ ನಂಬುವುದು ಕಷ್ಟ.

ಹಾಗಿದ್ದರೆ ಯಾರೀ ಕೆಲಸ ಮಾಡಿರಬಹುದು? ಮನೆಯಾಳೆಂಬುದು ಕಾರಣವಾಗಿ ದೀಪೂ ಮಾಡಿರಬಹುದೆ?

ಹಿಂದೆ ಒಂದೆರಡು ಬಾರಿ ಮನೆಯೊಳಕ್ಕೆ ಪ್ರವೇಶಿಸಲು ಯತ್ನಿಸಿದ್ದ ಪವನ್, ಮನೆಯೊಳ ಸೇರಿ ಅಗುಳಿ ಹಾಕಿ, ಶೀಲಾಳ ಮೇಲೆ ಅತ್ಯಾಚಾರ ಮಾಡಿ, ಚಿನ್ನವನ್ನು ಲಪಟಾಯಿಸುವ ಪ್ರಯತ್ನದಲ್ಲಿದ್ದಾಗ, ದೀಪೂ ಬಾಗಿಲೊಡೆದು ಆತನನ್ನು ಹಿಡಿಯುವ ಪ್ರಯತ್ನ ಮಾಡಿರಬಹುದೆ? ಅಥವಾ ರಾತ್ರಿಯವರೆಗೆ ಬಾರದಿದ್ದ ದೀಪೂ ಕೊಡವೂರಿನಿಂದ ಕಂಟ್ರಿಯೇರಿಸಿ ಬಂದು ಶೀಲಾಳನ್ನು ಬಾಗಿಲು ತೆಗೆಯುವಂತೆ ಹೆದರಿಸಿರಬಾರದೇಕೆ? ಆತನ ಅವತಾರವನ್ನು ಕಿಟಕಿಯ ಒಳಗಿನಿಂದಲೇ ಗಮನಿಸಿದ ಶೀಲಾ,